# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು

ಎಚ್.ಆರ್.ಸಿ. ನಂ.3203/10/2/2018 C/w 3207/10/2/2018

ದಿನಾಂಕ 17ನೇ ಫೆಬ್ರವರಿ ಮಾಹೆ, 2020

ಉಪಸ್ಥಿತರು:

**ಶ್ರೀ ಕೆ.ಬಿ. ಚಂಗಪ್ಪ,**

ಗೌರವಾನ್ವಿತ ಸದಸ್ಯರು

**ದೂರುದಾರರು :** 1. ಶ್ರೀ ಸಂತೋಷ ದುಂಡಪ್ಪಾ ಪದ್ಮಣ್ಣವರ,

2. ಶ್ರೀಮತಿ ಉಮಾ ಸಂತೋಷ ಪದ್ಮಣ್ಣವರ,

ಇಬ್ಬರೂ ವಾಸ: ಮನೆ ನಂ.1772, ಸೆಕ್ಟರ್ ನಂ.10,
ಅಂಜನೇಯ ನಗರ, ಮಾಳಮಾರುತಿ ಬಡಾವಣೆ,
ಬೆಳಗಾವಿ – 590016.

## ಆದೇಶ

ಈ ದೂರರ್ಜಿಗಳನ್ನು ಮಾಳಮಾರುತಿ ಬಡಾವಣೆ ಪೋಲೀಸ್ ಠಾಣೆಯ ಪೋಲೀಸ್ ಸಿಬ್ಬಂದಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಸಲುವಾಗಿ ಸಲ್ಲಿಸಲಾಗಿರುತ್ತದೆ.

2. ಈ ಎರಡೂ ಪ್ರಕರಣಗಳಲ್ಲಿನ ದೂರುದಾರರು ಪತಿ ಮತ್ತು ಪತ್ನಿಯರಾಗಿದ್ದು, ಎರಡೂ ಪ್ರಕರಣಗಳಲ್ಲಿ ಆಪಾದಿಸಿರುವ ವಿಷಯಗಳು ಒಂದೇ ಆಗಿರುವ ಕಾರಣ ಮತ್ತು ದೂರುಗಳನ್ನು ಬೆಳಗಾವಿ ಮಾಳಮಾರುತಿ ಬಡಾವಣೆ ಪೋಲೀಸ್ ಠಾಣೆ ಅಧಿಕಾರಿ ಮತ್ತು ಇತರರ ಮೇಲೆ ಸಲ್ಲಿಸಿರುವುದರಿಂದ ಎರಡೂ ಪ್ರಕರಣಗಳನ್ನು ಆದೇಶಕ್ಕಾಗಿ ಜಂಟಿಗೊಳಿಸಲಾಗಿದೆ.

3. ಎಚ್ಆರ್‌ಸಿ 3203/10/2/2018ರಲ್ಲಿ ದೂರುದಾರರು ಬೆಳಗಾವಿ ಅಂಜನೇಯ ನಗರ ಮಾಳಮಾರುತಿ ಬಡಾವಣೆ ವಾಸಿಯಾಗಿದ್ದು ತಮ್ಮ ಮನೆಯಲ್ಲಿ ಕಳ್ಳತನವಾದ ಕುರಿತು ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 22/2016ರಲ್ಲಿ ದಾಖಲಾಗಿದ್ದು ಆರೋಪಿ ಮಾಳವ್ವ ಮತ್ತು ಆಕೆಯ ಮಗನ ದೂರವಾಣಿ ಕರೆ ಹೇಳಿಕೆಯಲ್ಲಿ ಒಪ್ಪಿಕೊಂಡಂತೆ ಕಳವು ಮಾಡಿಟ್ಟ ಸ್ಥಳದಲ್ಲಿ ಬಂಗಾರದ ಆಭರಣಗಳು, ಟೈಟನ್ ವಾಚು, ಸೆಲ್

ಮತ್ತು ಲ್ಯಾಪ್‌ಟಾಪ್ ಬಿಲ್‌ಗಳನ್ನು ಗುರುತಿಸಿದ್ದು, ಆರೋಪಿತರ ವಿರುದ್ಧ ಠಾಣಾಧಿಕಾರಿಗಳು ಕ್ರಮ ಕೈಗೊಂಡಿಲ್ಲವೆಂಬುದು ಸದರಿ ದೂರರ್ಜಿ ಸಂಕ್ಷಿಪ್ತ ವಿಷಯವಾಗಿರುತ್ತದೆ.

4. ಎಚ್‌ಆರ್‌ಸಿ 3207/10/2/2018ರಲ್ಲಿ ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯ ಅಧಿಕಾರಿಗಳು ದೂರುದಾರರು ಮತ್ತು ಅವರ ಪತಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿಕೊಂಡು ತೊಂದರೆ ನೀಡುತ್ತಿದ್ದಾರೆ ಎಂಬುದಾಗಿದೆ.

5. ಉಲ್ಲೇಖಿತ ವಿಷಯವು ನಿಜವೇ ಆದಲ್ಲಿ ಅದು ಮಾನವ ಹಕ್ಕುಗಳ ಉಲ್ಲಂಘನೆಯಾಗುವುದರಿಂದ ದೂರುಗಳ ಪ್ರತಿಯನ್ನು ಹೆಚ್ಚುವರಿ ಪೋಲಿಸ್ ಮಹಾನಿರ್ದೇಶಕರು/ಪೋಲೀಸ್ ಮಹಾನಿರೀಕ್ಷಕರು. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ. ಬೆಂಗಳೂರು ಇವರಿಗೆ ಕಳುಹಿಸಿ ದೂರುಗಳ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸಲು ಆದೇಶಿಸಲಾಗಿತ್ತು. ಆ ಪ್ರಕಾರ ಆಯೋಗದ ಉಪ ಪೋಲೀಸ್ ಅಧೀಕ್ಷಕರು ದೂರುಗಳ ಬಗ್ಗೆ ವಿಚಾರಣೆ ನಡೆಸಿ ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯಲ್ಲಿ ಪಿರ್ಯಾದಿ ಸಂತೋಷ ಬಾಳಾಸಾಹೇಬ ಕುಡಚಿ ಎಂಬುವವರು ದಿನಾಂಕ 8-2-2018ರಂದು ಸಂಜೆ 7.45 ಗಂಟೆಯಲ್ಲಿ ಸಂತೋಷ ದುಂಡಪ್ಪಾ ಮತ್ತು ಈತನ ಪತ್ನಿ ಶ್ರೀಮತಿ ಉಮಾ ರವರ ವಿರುದ್ಧ ನೀಡಿದ ಪಿರ್ಯಾದಿ ಮೇರೆಗೆ ಪಿಎಸ್‌ಐ ಸೌದಾಗರ್‌ರವರು ಠಾಣಾ ಮೊಕದ್ದಮೆ ಸಂ.25/2018 ಕಲಂ 448, 504, 506 ಸಹ ಕಲಂ 34 ಐಪಿಸಿ ರೀತ್ಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡು. ಸದರಿ ಪ್ರಕರಣದಲ್ಲಿ ಆರೋಪಿಗಳಾದ ಸಂತೋಷ ದುಂಡಪ್ಪಾ ಮತ್ತು ಈತನ ಪತ್ನಿ ಶ್ರೀಮತಿ ಉಮಾ ರವರನ್ನು (ಆಯೋಗದ ದೂರುದಾರರು) ಜಾಮೀನು ಪಡೆದು ಬಿಡುಗಡೆಗೊಳಿಸಲಾಗಿರುತ್ತದೆ ಮತ್ತು ದೂರುದಾರರು ಮಾಡಿರುವ ಆಪಾದನೆಗಳ ಬಗ್ಗೆ ಮಾಳಮಾರುತಿ ಬಡಾವಣೆ ಠಾಣಾ ಮೊಕದ್ದಮೆ ಸಂ.22/2016ರ ಕೇಸನ್ನು ತನಿಖೆ ಮಾಡಿ ಆರೋಪಿಗಳಾದ 1. ಮಾಳವ್ವಾ ಶಿವನಪ್ಪ ಅಸುಂಡಿ, 2. ಗೋಪಾಲ ಶಿವನಪ್ಪ ಅಸುಂಡಿ ಇವರುಗಳಿಗೆ ಸೂಕ್ತ ರೀತ್ಯ ವಿಚಾರಣೆ ಹಾಗೂ ದಸ್ತಗಿರಿ ಕ್ರಮ ಅನುಸರಿಸದೇ ಕಳ್ಳತನ ಮಾಲನ್ನು ವಶಪಡಿಸಿಕೊಳ್ಳದೇ ಪಿ.ಐ. ಶ್ರೀ ಜ್ಯೋತಿರ್ಲಿಂಗ ಹೊನಕಟ್ಟಿ ರವರು ಕರ್ತವ್ಯದಲ್ಲಿ ನಿಷ್ಕಾಳಜಿತನ ತೋರಿಸಿರುವುದು ವಿಚಾರಣೆಯಿಂದ ಕಂಡುಬರುತ್ತದೆಂದು ವರದಿಯನ್ನು ಸಲ್ಲಿಸಿರುತ್ತಾರೆ.

6. ಸದರಿ ವರದಿ ಪ್ರತಿಯನ್ನು ಬೆಳಗಾವಿ ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯ ಪಿ.ಐ. ಶ್ರೀ ಜ್ಯೋತಿರ್ಲಿಂಗ ಹೊನಕಟ್ಟಿ ರವರಿಗೆ ಕಲಂ.16 ಪಿಹೆಚ್‌ಆರ್ ಅಧಿನಿಯಮ,

/೭ ಪು.

1993ರ ಅಡಿ ಕಳುಹಿಸಿ ಆಯೋಗದ ಪೋಲೀಸ್ ಉಪಾಧೀಕ್ಷಕರ ವರದಿ ಬಗ್ಗೆ ತಮ್ಮ ಅಭಿಪ್ರಾಯ/ಆಕ್ಷೇಪಣೆ ಏನಾದರೂ ಇದ್ದರೆ ಸಲ್ಲಿಸಲು ಆದೇಶಿಸಲಾಗಿತ್ತು. ಆ ಬಗ್ಗೆ ಪಿ.ಐ. ಶ್ರೀ ಜ್ಯೋತಿರ್ಲಿಂಗ ಹೊನಕಟ್ಟಿ ರವರು ಆಯೋಗದ ಮುಂದೆ ಹಾಜರಾಗಿ, ಶ್ರೀಯುತ ಸಂತೋಷ ತಂದೆ ದುಂಡಪ್ಪ ಪದ್ಮಣ್ಣವರ ದಿನಾಂಕ 27-11-2016ರಂದು ಅವರ ಮನೆ ಕಳ್ಳತನವಾದ ಬಗ್ಗೆ ದೂರು ಸಲ್ಲಿಸಿದ್ದು ಅದನ್ನು ಠಾಣೆಯ ಅಪರಾಧ ಸಂಖ್ಯೆ 22/2016ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಶ್ರೀಮತಿ ಮಲ್ಲವ್ವಾ ಮತ್ತು ಆಕೆಯ ಮಗನಾದ ಗೋಪಾಲ ಇವರುಗಳು ವಿಚಾರಣೆಗೆ ಒಳಪಡಿಸಲು ತಾನು ಸ್ವತ: ಮಲ್ಲಮ್ಮನ ಮನೆ, ಅವಳು ಕಾರ್ಯ ನಿರ್ವಹಿಸುವ ಮನೆಗಳಿಗೆ ಭೇಟಿ ನೀಡಿ ಹುಡುಕಾಡಿದರೂ ನಿಖರವಾದ ಮಾಹಿತಿ ಸಿಗಲಿಲ್ಲ, ಆ ಬಗ್ಗೆ ತಮ್ಮ ಪೋಲಿಸ್ ಸಿಬ್ಬಂದಿಗಳಿಗೆ ಸದರಿ ಆರೋಪಿಗಳನ್ನು ಹುಡುಕಿ ತನ್ನ ಮುಂದೆ ಹಾಜರುಪಡಿಸುವಂತೆ ಆದೇಶ ಮಾಡಿದ್ದು ಇರುತ್ತದೆ. ಸದರಿ ಪ್ರಕರಣವು ತನ್ನ ಬಳಿ ದಿನಾಂಕ 27-1-2016ರಿಂದ 25-3-2016ರ ವರೆಗೆ ಕೇವಲ 46 ದಿನಗಳವರೆಗೆ ಮಾತ್ರ ಇದ್ದು ನಂತರ ಅದನ್ನು ಮಾರಿಹಾಳ ಪೋಲಿಸ್ ಠಾಣೆಗೆ ವರ್ಗಾಯಿಸಿದ್ದು ಇರುತ್ತದೆ. ಇದಲ್ಲದೆ ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯಲ್ಲಿ ಶ್ರೀಯುತ ಸಂತೋಷ ದುಂಡಪ್ಪಾ ಪದ್ಮಣ್ಣವರ, ಶ್ರೀಮತಿ ಉಮಾ ಸಂತೋಷ ಪದ್ಮಣ್ಣವರ ಹಾಗೂ ಇತರರ ಮೇಲೆ ಪ್ರಕರಣ ಸಂ.317/2015 ದಾಖಲಾಗಿರುತ್ತದೆ. ಇದೇ ಪ್ರಕರಣದಲ್ಲಿ ಪೋಲೀಸರು ಸುಳ್ಳು ಕೇಸು ದಾಖಲಿಸಿರುತ್ತಾರೆ ಅಂತ ವೈಮನಸ್ಸು ಇಟ್ಟುಕೊಂಡಿದ್ದು ಸದರಿ ಪ್ರಕರಣ ದಾಖಲು ಆಗಿದ್ದರಿಂದ ಎಲ್ಲಾ ಆರೋಪಿಗಳು ಊರು ಬಿಟ್ಟು ತಲೆ ಮರೆಸಿಕೊಂಡು ದಿನಾಂಕ 27-1-2016ರಂದು ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಬಂದು ಶ್ರೀಮತಿ ಮಲ್ಲಮ್ಮ ಮತ್ತು ಆಕೆಯ ಮಗ ಗೋಪಾಲನ ಮೇಲೆ ದೂರು ಕೊಟ್ಟಿದ್ದು ಇರುತ್ತದೆ. ಮೇಲ್ಕಂಡ ಎರಡೂ ಪ್ರಕರಣಗಳು ಅಂದರೆ ಪ್ರಕರಣ ಸಂ.317/2015 ಮತ್ತು ಪ್ರಕರಣ ಸಂ.22/2016 ಎರಡೂ ಪ್ರಕರಣಗಳು ತನ್ನ ಬಳಿ ಇದ್ದುದರಿಂದ ಸದರಿ ಪ್ರಕರಣಗಳನ್ನು ಮಾರಿಹಾಳ ಪೋಲೀಸ್ ಠಾಣೆಗೆ ಆಯುಕ್ತರವರ ಆದೇಶದ ಪ್ರಕಾರ ವರ್ಗಾಯಿಸಲಾಗಿರುತ್ತದೆ, ದೂರುದಾರಳ ಗಂಡ ಮತ್ತು ಸಂಬಂಧಿಕರ ಮೇಲೆ ಮಾಳಮಾರುತಿ ಬಡಾವಣೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಕಾರಣ ತಮ್ಮ ಮೇಲೆ ದುರುದ್ದೇಶದಿಂದ ದೂರನ್ನು ನೀಡಿರುತ್ತಾರೆ, ತಾನು ಕರ್ತವ್ಯದಲ್ಲಿ ಯಾವುದೇ ರೀತಿ ನಿರ್ಲಕ್ಷ್ಯತನ ತೋರಿಸಿರುವುದಿಲ್ಲ ಮತ್ತು ತನ್ನ ಮೇಲೆ ಮಾಡಿರುವ ಆಪಾದನೆಯು ಸತ್ಯಕ್ಕೆ

ದೂರವಾದ ಸಂಗತಿಯಾಗಿರುತ್ತದೆ. ತನ್ನ ಮೇಲಿನ ದೂರನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

7. ದೂರರ್ಜಿಗಳು, ಆಯೋಗದ ಪೋಲಿಸ್ ಉಪಾಧೀಕ್ಷಕರವರ ವರದಿ ಹಾಗೂ ಪಿ.ಐ. ಶ್ರೀ ಜ್ಯೋತಿರ್ಲಿಂಗ ಹೊನಕಟ್ಟಿ ರವರ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದಿನಾಂಕ 27-1-2016ರಂದು ಬೆಳಗ್ಗೆ 9.30 ಗಂಟೆಗೆ ದೂರರ್ಜಿದಾರರಾದ ಶ್ರೀಯುತ ಸಂತೋಷ ತಂದೆ ದುಂಡಪ್ಪಾ ಪದ್ಮಣ್ಣವರ ರವರು ನೀಡಿದ ದೂರಿನನ್ವಯ ಮಾಳಮಾರುತಿ ಬಡಾವಣೆ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂ.22/2016ರ ಅಡಿಯಲ್ಲಿ ಕಲಂ 454, 457, 380, 381 ಐಪಿಸಿ ಅನ್ವಯ ಆಗಿನ ಮಾಳಮಾರುತಿ ಬಡಾವಣೆ ಪೋಲೀಸ್ ಠಾಣೆಯ ಪಿಐ ರವರು ತಮ್ಮ ಅಭಿಪ್ರಾಯದಲ್ಲಿ ತಾನು ಸದರಿ ಪ್ರಕರಣ ದಾಖಲು ಆದನಂತರ ಎಲ್ಲ ಹಂತದ ಪ್ರಕ್ರಿಯೆಗಳನ್ನು ಕೈಗೊಂಡಿದ್ದು ಸದರಿ ಪ್ರಕರಣದಲ್ಲಿ ಆರೋಪಿಗಳಾದ ಶ್ರೀಮತಿ ಮಲ್ಲಮ್ಮ ಮತ್ತು ಆಕೆಯ ಮಗನ ದಸ್ತಗಿರಿಗಾಗಿ ಆಕೆಯ ಮನೆ ಮತ್ತು ಆಕೆಯು ಕಾರ್ಯ ನಿರ್ವಹಿಸುವ ಮನೆಗಳಿಗೆ ಭೇಟಿ ನೀಡಿ ಹುಡುಕಾಡಿದಾಗ ಆರೋಪಿತರು ಸಿಗದಿದ್ದಾಗ ಆ ಬಗ್ಗೆ ತನ್ನ ಸಿಬ್ಬಂದಿಗೆ ತಿಳಿಸಿ ಆರೋಪಿಗಳನ್ನು ಹುಡುಕಿ ತನ್ನ ಮುಂದೆ ಹಾಜರುಪಡಿಸಲು ಆದೇಶಿಸಿರುತ್ತೇನೆ, ಅಲ್ಲದೇ ಸದರಿ ಪ್ರಕರಣವು ತನ್ನ ಸುಪರ್ದಿಯಲ್ಲಿ ಕೇವಲ 46 ದಿನಗಳು ಮಾತ್ರ ಇದ್ದು, ನಂತರ ಅದು ಪೋಲೀಸ್ ಆಯುಕ್ತರವರ ಆದೇಶದನ್ವಯ ಮಾರಿಹಾಳ ಪೋಲೀಸ್ ಠಾಣೆಗೆ ವರ್ಗಾವಣೆಯಾಗಿರುವುದು ಕಂಡುಬರುತ್ತದೆ, ಅಂದರೆ ಪ್ರಕರಣ ದಾಖಲಾಗಿ 46 ದಿನಗಳವರೆಗೆ ಆರೋಪಿಗಳನ್ನು ದಸ್ತಗಿರಿ ಮಾಡಿ ಕಳ್ಳತನವಾದ ಸ್ವತ್ತುಗಳನ್ನು ಜಪ್ತಿ/ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಯಾದ ಶ್ರೀ ಜ್ಯೋತಿರ್ಲಿಂಗ ಹೊನಕಟ್ಟಿ ರವರು ಪ್ರಾಮಾಣಿಕವಾದ ಯತ್ನ ನಡೆಸಿರುವುದು ಕಂಡುಬರುವುದಿಲ್ಲ. ಸದರಿ ಪ್ರಕರಣವು ಮಾರಿಹಾಳ ಪೋಲೀಸ್ ಠಾಣೆಗೆ ವರ್ಗಾವಣೆಯಾದ ನಂತರ ಅಂದರೆ ದಿನಾಂಕ 14-8-2018ರಂದು ಸದರಿ ಪ್ರಕರಣದ ಆರೋಪಿಗಳನ್ನು ದಸ್ತಗಿರಿ ಮಾಡಿ ಕೇವಲ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡು ಠಾಣಾ ಮಾಲು ಪಟ್ಟಿ ಸಂ.88/2018ರ ಪ್ರಕಾರ ನ್ಯಾಯಾಲಯಕ್ಕೆ ಮಾಲು ಪಟ್ಟಿ ಸಲ್ಲಿಸಿರುವುದು ಕಂಡುಬರುತ್ತದೆ. ಅಂದರೆ ಪ್ರಕರಣ ಮಾರಿಹಾಳ ಬಡಾವಣೆ ಪೋಲೀಸ್ ಠಾಣೆಗೆ ವರ್ಗಾವಣೆಯಾದ ನಂತರ ಕೆಲವೇ ದಿನಗಳಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿ ಕೆಲವು ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಆದರೆ ಪಿಐ ಶ್ರೀ ಜ್ಯೋತಿರ್ಲಿಂಗ ಹೊನಕಟ್ಟಿ ರವರು ಸದರಿ ಪ್ರಕರಣವು ತಮ್ಮ ಸುಪರ್ದಿಯಲ್ಲಿ 46 ದಿನಗಳು ಇದ್ದರೂ ಸಹ ಆರೋಪಿಗಳನ್ನು

ಕೂಡಲೆ ದಸ್ತಗಿರಿ ಮಾಡಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಪ್ರಾಮಾಣಿಕ ಯತ್ನ ನಡೆಸದೆ ನಿರ್ಲಕ್ಷ್ಯತನ ತೋರಿಸಿರುವುದು ಆಯೋಗದ ಪೋಲಿಸ್ ಉಪಾಧೀಕ್ಷಕರ ವರದಿ ಹಾಗೂ ದಾಖಲೆಗಳಿಂದ ಕಂಡುಬರುತ್ತದೆ. ದೂರರ್ಜಿಯಲ್ಲಿ ತಿಳಿಸಿರುವ ಪ್ರಕಾರ ದೂರರ್ಜಿದಾರರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲೆ ಮಾಡಿಕೊಂಡು ಅವರಿಗೆ ತೊಂದರೆ ನೀಡಲಾಗಿರುತ್ತದೆ ಎನ್ನುವ ಬಗ್ಗೆ ನಿರ್ಧಿಷ್ಟವಾದ ಪುರಾವೆ ಕಂಡುಬರುವುದಿಲ್ಲ. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಪೋಲೀಸ್ ಉಪಾಧೀಕ್ಷಕರ ವರದಿ ಮತ್ತು ಇತರ ದಾಖಲೆಗಳನ್ನು ಪರಿಶೀಲಿಸಲಾಗಿ, ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯಲ್ಲಿ ದೂರರ್ಜಿದಾರರಾದ ಸಂತೋಷ ದುಂಡಪ್ಪ ಪದ್ಮಣ್ಣನವರ, ಶ್ರೀಮತಿ ಉಮಾ ಸಂತೋಷ ಪದ್ಮಣ್ಣನವರ ಹಾಗೂ ಅವರ ಸಂಬಂಧಿಗಳ ಮೇಲೆ ಪ್ರಕರಣ ಸಂ.317/2015 ದಿನಾಂಕ 27-12-2015ರಂದು ದಾಖಲಾಗಿದ್ದು ನಂತರ ದಿನಾಂಕ 27-1-2016ರಂದು ಶ್ರೀಮತಿ ಮಲ್ಲಮ್ಮ ಮತ್ತು ಆಕೆಯ ಮಗನಾದ ಗೋಪಾಲನ ವಿರುದ್ಧ ದೂರು ನೀಡಿದನ್ವಯ ಕೇಸು ಮತ್ತು ಪ್ರತಿಕೇಸು ದಾಖಲಾಗಿರುತ್ತವೆ. ದೂರರ್ಜಿ ಮೇಲೆ ಪ್ರಕರಣವು ದಾಖಲಾಗಿ ವಿಚಾರಣೆ ಹಂತದಲ್ಲಿರುವುದರಿಂದ ಮತ್ತು ಸದರಿ ಪ್ರಕರಣದ ವಿಚಾರಣೆಯು ಮಾರಿಹಾಳ ಪೋಲೀಸ್ ಠಾಣೆಗೆ ವರ್ಗಾವಣೆ ಮಾಡಿರುವುದರಿಂದ ದೂರರ್ಜಿದಾರರ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಲಾಗಿತ್ತೋ/ಇಲ್ಲವೋ ಎಂದು ಈ ಹಂತದಲ್ಲಿ ತೀರ್ಮಾನಿಸಲು ಸಾಧ್ಯವಿರುವುದಿಲ್ಲ. ಸದರಿ ವಿಷಯವು ನ್ಯಾಯಾಲಯಕ್ಕೆ ಬಿಟ್ಟ ವಿಚಾರವಾಗಿರುತ್ತದೆ. ಮೇಲ್ಕಂಡ ಕಾರಣಗಳಿಂದ ಈ ಕೆಳಗಿನಂತೆ ಅಭಿಪ್ರಾಯ/ವರದಿ ಮತ್ತು ಶಿವಾರಸ್ಸುಗಳನ್ನು ಮಾಡಲಾಗಿರುತ್ತದೆ.

8. ಆಗಿನ ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯ ಪಿ.ಐ. ಶ್ರೀ ಜ್ಯೋತಿರ್ಲಿಂಗ ಹೊನಕಟ್ಟಿ ರವರು ಮಾಳಮಾರುತಿ ಬಡಾವಣೆ ಪೋಲಿಸ್ ಠಾಣೆಯ ಪ್ರಕರಣ ಸಂ.22/2016ರಲ್ಲಿ ದೂರರ್ಜಿದಾರರು ನೀಡಿದ ದೂರಿನ ಅನ್ವಯ ಕಲಂ 454, 457, 380, 381 ಐಪಿಸಿ ಅನ್ವಯ ಪ್ರಕರಣ ದಾಖಲು ಮಾಡಿಕೊಂಡಿದ್ದರೂ ಸಹ ಸದರಿ ಪ್ರಕರಣದ ಆರೋಪಿಗಳ ದಸ್ತಗಿರಿಗೆ ಮತ್ತು ಕಳವು ಮಾಡಿದ ವಸ್ತುಗಳನ್ನು ವಶಪಡಿಸಿಕೊಳ್ಳಲು ತಕ್ಷಣ ಯತ್ನ ಮಾಡದೇ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿಸಿರುವುದು ಕಂಡುಬರುವುದರಿಂದ, ಸದರಿಯವರಿಗೆ ಇನ್ನು ಮುಂದೆ ಇಂಥಹ ಘಟನೆಗಳಿಗೆ ಅವಕಾಶ ನೀಡಬಾರದೆಂದು ಎಚ್ಚರಿಕೆಯನ್ನು ನೀಡಲು ಬೆಳಗಾವಿ ಜಿಲ್ಲೆ ಪೋಲೀಸ್ ಅಧೀಕ್ಷಕರಿಗೆ ಸೂಚಿಸಿ ಶಿಫಾರಸ್ಸು ಮಾಡಲಾಗಿದೆ.

9. ಮೇಲ್ಕಂಡ ಶಿಫಾರಸ್ಸುಗಳನ್ನು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 19(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳೊಳಗೆ ಅನುಪಾಲನಾ ವರದಿಯನ್ನು ಬೆಳಗಾವಿ ಜಿಲ್ಲೆ ಪೋಲೀಸ್ ಅಧೀಕ್ಷಕರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೋಲಿಸ್ ಸಿಬ್ಬಂದಿ ಕಲಂ 22 ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರ ಅನುಸಾರ ಅಭಿಪ್ರಾಯ/ಶಿಫಾರಸ್ಸುಗಳನ್ನು ತಿದ್ದುಪಡಿ/ಮರುಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಿ ಮೇಲ್ಕಂಡ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

(ಕೆ.ಬಿ. ಚಂಗಪ್ಪ)
ಸದಸ್ಯರು

ಎಸ್ಆರ್‌ಸ್